ಸೋಮವಾರ 05.01.2026
ಬೆಂಗಳೂರು, ಬೆಲೆ: 5ರೂ,
2 ಪುಟಗಳು
ಸಂಪುಟ 01 - ಸಂಚಿಕೆ 111
Digital Varthe Kannada Daily
Volume 01 - Issue 111
Monday 05.01.2026
Price: 5/- Rs
2 Pages Bangalore

PRGI/RNI: KNKAN/25/A1348

# ಡಿಜಿಟಲ್ ವಾರ್ತೆ

ಕನ್ನಡಿಗರ ಶಕ್ತಿ

ಕನ್ನಡ ದಿನಪತ್ರಿಕೆ

DIGITAL VARTHE
digitalvarthe@gmail.com
www.digitalvarthe.com

## ಸೋಂಪುರ ಹೋಬಳಿಯಲ್ಲಿ ಸಿದ್ದರಾಮೇಶ್ವರ ಜಯಂತಿ ವಿಶೇಷ ಆಚರಣೆ

### ಜ. 14 & 15ರಂದು ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮಗಳು; ಭವ್ಯ ಮೆರವಣಿಗೆ, ಪ್ರತಿಭಾ ಪುರಸ್ಕಾರ ಹಾಗೂ ನಾಟಕ ಪ್ರದರ್ಶನ



**ನೆಲಮಂಗಲ** :ನೆಲಮಂಗಲ ವಿಧಾನಸಭಾ ಕ್ಷೇತ್ರದ ಭೋವಿ ಸಮಾಜವನ್ನು ಉದ್ದೇಶಿಸಿ ಸಿದ್ದರಾಮೇಶ್ವರ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆ ನಡೆಸಲಾಗಿದ್ದು, ಸಭೆಗೆ ಆಗಮಿಸಿದ ಸಮಾಜದ ಸದಸ್ಯರಿಗೆ ಆಯೋಜಕರಿಂದ ಅಭಿನಂದನೆ ಸಲ್ಲಿಸಲಾಗಿದೆ.

ಜನವರಿ 14, 2026ರಂದು ನೆಲಮಂಗಲದಲ್ಲಿ ಹಾಗೂ ಜನವರಿ 15, 2026ರಂದು ಸೋಂಪುರ ಹೋಬಳಿಯಲ್ಲಿ ಸಿದ್ದರಾಮೇಶ್ವರ ಜಯಂತಿಯನ್ನು ವಿಶೇಷವಾಗಿ ಆಚರಿಸಲು ಈ ಬಾರಿ ಭೋವಿ ಸಮಾಜದ ಮುಖಂಡರು ಹಾಗೂ ಕುಲಬಾಂಧವರು ಒಟ್ಟಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ.

ಸೋಂಪುರ ಹೋಬಳಿಯಲ್ಲಿ ನಡೆಯುವ ಜಯಂತಿ ಆಚರಣೆಯ ಅಂಗವಾಗಿ ಸಿದ್ದರಾಮೇಶ್ವರ ಸ್ವಾಮಿಯ ಪ್ರತಿಮೆಯನ್ನು ಬೆಳ್ಳಿ ರಥದಲ್ಲಿ ಭವ್ಯ ಮೆರವಣಿಗೆ ನಡೆಸಲಾಗುವುದು. ಮಹಿಳೆಯರಿಂದ ಕಳಸ ಪೂಜೆ, ವಿವಿಧ ಕಲಾತಂಡಗಳಿಂದ ವೃತ್ತಿ ಹಾಗೂ ಸಾಂಸ್ಕೃತಿಕ ಮೆರವಣಿಗೆ ಕಾರ್ಯಕ್ರಮಗಳು ಆಯೋಜಿಸಲಾಗಿದೆ.

ಇದೇ ವೇಳೆ SSLC ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಸಮಾಜ ಸೇವೆ ಹಾಗೂ ವಿಶಿಷ್ಟ ಕೊಡುಗೆ ನೀಡಿದ ಗಣ್ಯ ವ್ಯಕ್ತಿಗಳಿಗೆ ಸನ್ಮಾನ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ.

ವಿಶೇಷವಾಗಿ ಸೋಂಪುರ ಹೋಬಳಿಯಲ್ಲಿ ಭೋವಿ ಸಮಾಜದ ಮುಖಂಡರ ಸಹಕಾರದಲ್ಲಿ 'ಕುರುಕ್ಷೇತ್ರ' ಅಥವಾ 'ಶ್ರೀ ಕೃಷ್ಣ ಸಂಧಾನ' ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದೆ.

ಈ ಎರಡು ದಿನಗಳ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಭೋವಿ ಸಮಾಜದ ಮುಖಂಡರು, ಯುವಕರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

ಸಭೆಯಲ್ಲಿ ಮಾಜಿ ಶಾಸಕ ಎಂ.ವಿ ನಾಗರಾಜು, ಮಾಜಿ ಜಿ.ಪಂ ಸದಸ್ಯ ಎಂ.ಎನ್ ರಾಮು, ಮುಖಂಡರಾದ ಚಿಕ್ಕಣ್ಣ, ತಿಮ್ಮರಾಜು, ಮಾರಗೊಂಡನಹಳ್ಳಿ ರಮೇಶ್, ಚೇತನ್, ರಾಜು, ಪ್ರಕಾಶ್ ಬೂದಿಹಾಳ್, ಮಾರುತೇಶ್, ರಾಮಕೃಷ್ಣಯ್ಯ, ತಿಮ್ಮರಾಜು, ರಂಗಣ್ಣ, ಲೋಕೇಶ್, ಸಿವಿಲ್ ಗುತ್ತಿಗೆದಾರ ಗುರುದೀಪ್.ಎಲ್, ವೆಂಕಟೇಶ್ ಸೇರಿದಂತೆ ಹಲವರು ಮುಖಂಡರು ಪಾಲ್ಗೊಂಡಿದ್ದರು.



**ಸೋಂಪುರ ಹೋಬಳಿಯಲ್ಲಿ ನಡೆದ ಸಭೆಯಲ್ಲಿ ಮಾಜಿ.ಜಿ.ಪಂ ಸದಸ್ಯರಾದ ವೆಂಕಟೇಶಯ್ಯ, ಗೊಟ್ಟಿಗೆರೆ ಮುನಿರಾಜು, ಪುಟ್ಟರಾಜು, ಲೋಕೇಶ್, ಪೆಮ್ಮನಹಳ್ಳಿ ಸಿದ್ದರಾಜು, ಹುಚ್ಚವೀರಯ್ಯನಪಾಳ್ಯ ರುದ್ರೇಶ್, ರವಿ, ಕೆಂಗಲ್ ಶ್ರೀನಿವಾಸ್, ಹಳೇ ನಿಜಗಲ್ ವೆಂಕಟೇಶ್, ಸಿದ್ದರಾಜು, ಕೆ.ಜಿ ಶ್ರೀನಿವಾಸಪುರ ವೆಂಕಟೇಶ್, ಸಿದ್ದರಾಜು, ಗೋವಿಂದ ರಾಜು, ಕೆಂಪರಾಜು, ಚಂದನಹೊಸಹಳ್ಳಿ ರಾಮು, ಗೋವಿಂದಪುರ ಪ್ರಕಾಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.**

## ಹಿಂದುಳಿದವರು ಸಂಘಟಿಸಿದರೆ ಜಾತೀಯತೆಯಾಗುವುದಿಲ್ಲ: ಸಿಎಂ

### ಉಪಜಾತಿಗಳಲ್ಲಿ ವಿಭಜಿಸದೇ ಒಂದೇ ಶಕ್ತಿಯಾಗಿ ಸಂಘಟಿತರಾಗಬೇಕೆಂದು ದೇವಾಂಗ ಸಮುದಾಯಕ್ಕೆ ಕರೆ



ಬೆಂಗಳೂರು: ಹಿಂದುಳಿದ ಸಮುದಾಯಗಳು ಸಂಘಟಿತವಾದರೆ ಅದು ಜಾತೀಯತೆಯಾಗುವುದಿಲ್ಲ. ಉಪಜಾತಿಗಳಲ್ಲಿ ವಿಭಜಿಸದೇ ಒಂದೇ ಶಕ್ತಿಯಾಗಿ ಸಂಘಟಿತರಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮುದಾಯಗಳಿಗೆ ಕರೆ ನೀಡಿದರು. ದೇವಾಂಗ ಸಂಘ ಬೆಂಗಳೂರು ವತಿಯಿಂದ ಆಯೋಜಿಸಲಾಗಿದ್ದ ದೇವಾಂಗ ಸಂಘದ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ದೇವಾಂಗ ಸಮುದಾಯದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿರುವ ಸಂಘವು ನೂರು ವರ್ಷಗಳನ್ನು ಪೂರೈಸಿರುವುದು ಮಹತ್ವದ ಮೈಲಿಗಲ್ಲು ಎಂದು ಮುಖ್ಯಮಂತ್ರಿಗಳು ಹೇಳಿದರು. ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ನಿಲಯ ವ್ಯವಸ್ಥೆ ಒದಗಿಸಲಾಗುತ್ತಿರುವುದು ಸಂತಸದ ವಿಷಯವಾಗಿದೆ ಎಂದು ಅವರು ಪ್ರಶಂಸಿಸಿದರು.

ಮಹಿಳೆಯರು ಹಾಗೂ ಶೋಷಿತ ವರ್ಗಗಳು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ಇತಿಹಾಸವಿದೆ. ಇಂದಿನ ದಿನಗಳಲ್ಲಿ ಲಿಂಗ ತಾರತಮ್ಯ ಕಡಿಮೆಯಾಗುತ್ತಿದ್ದು, ದೇವಾಂಗ ಸಂಘವು ಮಹಿಳಾ ಸಬಲೀಕರಣಕ್ಕೆ ಸಹಕಾರ ನೀಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು. ಮಹಿಳಾ ವಸತಿನಿಲಯ ನಿರ್ಮಾಣಕ್ಕೆ ಸರ್ಕಾರದಿಂದ ಅಗತ್ಯ ಸಹಾಯ ನೀಡಲಾಗುವುದು ಎಂದು ಭರವಸೆ ನೀಡಿದರು.

ಸಮುದಾಯ ಸಂಘಟನೆಯ ಅಗತ್ಯತೆ ಎಲ್ಲರನ್ನೊಳಗೊಂಡ ಅಭಿವೃದ್ಧಿಯೇ ಸರ್ಕಾರದ ಧ್ಯೇಯವಾಗಿದೆ. ಶ್ರೀಮಂತ ಇತಿಹಾಸವಿದ್ದರೂ ದೇವಾಂಗ ಸಮುದಾಯ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿದೆ ಎಂದು ಹೇಳಿದರು.

ರೈತರು ಆಹಾರ ಉತ್ಪಾದಿಸಿದಂತೆ, ನೇಕಾರರು ಬಟ್ಟೆ ತಯಾರಿಸುತ್ತಾರೆ. ಸಂಘಟನೆಯ ಮೂಲಕವೇ ಶಕ್ತಿ ಬೆಳೆಯುತ್ತದೆ. ಹಿಂದುಳಿದವರು ಸಂಘಟಿತರಾದರೆ ಅದು ಜಾತೀಯತೆಯಾಗುವುದಿಲ್ಲ ಎಂದು ಸಮಾಜ ಚಿಂತಕ ಲೋಹಿಯಾ ಹೇಳಿದ್ದಾರೆ ಎಂದು ಸಿದ್ದರಾಮಯ್ಯ ಉಲ್ಲೇಖಿಸಿದರು. ಬಸವಾದಿ ಶರಣರು ಜಾತಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿದ್ದರು. ಡಾ. ಬಿ.ಆರ್. ಅಂಬೇಡ್ಕರ್ ಅವರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸ್ವಾತಂತ್ರ್ಯದಿಂದ ಮಾತ್ರ ಸಮಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದ್ದಾರೆ ಎಂದು ಹೇಳಿದರು.

ದೇವಾಂಗ ಸಮುದಾಯದಲ್ಲಿರುವ ಎಲ್ಲ ಉಪಜಾತಿಗಳನ್ನು ತೆಗೆಯಬೇಕು. ಹಲವು ಗುಂಪುಗಳಿದ್ದರೂ ಒಂದೇ ಶಕ್ತಿಯಾಗಿ ಸಂಘಟಿತರಾಗಬೇಕೆಂದು ಮುಖ್ಯಮಂತ್ರಿಗಳು ಮನವಿ ಮಾಡಿದರು. ಸಮಾಜದಲ್ಲಿ ಸಾಕ್ಷರತೆ ಶೇ.76ರಷ್ಟಿದ್ದು, ಮಹಿಳೆಯರಲ್ಲಿ ಇದು ಕಡಿಮೆ ಇದೆ. ಪ್ರತಿಯೊಬ್ಬರೂ ಶಿಕ್ಷಿತರಾಗಬೇಕು. ಜಾತಿವ್ಯವಸ್ಥೆಯಿಲ್ಲದ ಸಮಾಜ ನಿರ್ಮಾಣವೇ ಸಂವಿಧಾನದ ಆಶಯವಾಗಿದೆ ಎಂದು ತಿಳಿಸಿದರು.

ಪುಟ 02ಕ್ಕೆ....

## ಕುಂಚಿಟಿಗರು ಸ್ವತಂತ್ರ ಜಾತಿ; ಒಕ್ಕಲಿಗರ ಉಪಜಾತಿಯಲ್ಲ: ರಂಗಹನುಮಯ್ಯ

### ಕೇಂದ್ರದ ಓಬಿಸಿ ಪಟ್ಟಿಗೆ ಸೇರಿಸುವಲ್ಲಿ ವಿಳಂಬ; ಅಸ್ತಿತ್ವ ಉಳಿಸಲು ಒಳಒಗ್ಗಟ್ಟು ಅಗತ್ಯ ಎಂದು ಕರೆ



**ನೆಲಮಂಗಲ:** ಕುಂಚಿಟಿಗ ಸಮಾಜವು ತನ್ನದೇ ಆದ ವಿಶಿಷ್ಟ ಇತಿಹಾಸ ಹೊಂದಿರುವ ಸ್ವತಂತ್ರ ಜಾತಿಯಾಗಿದ್ದು, ಇದನ್ನು ಒಕ್ಕಲಿಗ ಸಮಾಜದ ಉಪಜಾತಿಯೆಂದು ಬಿಂಬಿಸುವ ಮೂಲಕ ಸಮಾಜವನ್ನು ಒಡೆಯುವ ಪ್ರಯತ್ನ ನಡೆಯುತ್ತಿದೆ ಎಂದು ಅಖಿಲ ಕುಂಚಿಟಿಗ ಮಹಾಸಭಾದ ರಾಜ್ಯಾಧ್ಯಕ್ಷ ರಂಗ ಹನುಮಯ್ಯ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕಿನ ಗಂಡರಗೋಳಿಪುರದಲ್ಲಿ ಆಯೋಜಿಸಲಾಗಿದ್ದ ಅಖಿಲ ಕುಂಚಿಟಿಗ ಮಹಾಸಭಾದ ರಾಜ್ಯ ಪದಾಧಿಕಾರಿಗಳ ದ್ವೈಮಾಸಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕುಂಚಿಟಿಗರು ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ದಿಕ್ಕಾಪಾಲಾಗುತ್ತಿರುವುದು ಆತಂಕಕಾರಿ ಸಂಗತಿ ಎಂದು ವಿಷಾದಿಸಿದರು.

ಕುಂಚಿಟಿಗರಿಗೆ ಕೇಂದ್ರದ ಓಬಿಸಿ ಪಟ್ಟಿಯಲ್ಲಿ ಸ್ಥಾನವಿಲ್ಲ ಎಂಬ ನೆಪವೊಡ್ಡಿ, "ನೀವೆಲ್ಲರೂ ಒಕ್ಕಲಿಗರು" ಎಂದು ಜಾತಿ ಪ್ರಮಾಣಪತ್ರ ಬರೆಸಿಕೊಳ್ಳುವಂತೆ ಕೆಲವರು ಸಮಾಜವನ್ನು ದಾರಿ ತಪ್ಪಿಸುತ್ತಿದ್ದಾರೆ. ಆದರೆ ಕುಂಚಿಟಿಗ ಜನಾಂಗವು ಯಾವುದೇ ಕಾರಣಕ್ಕೂ ಒಕ್ಕಲಿಗರ ಉಪಜಾತಿಯಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಕೆಲವು ನಾಯಕರು ನಮ್ಮ ಸಮಾಜವನ್ನು ತುಳಿಯುವ ಕೆಲಸ ಮಾಡುತ್ತಿದ್ದು, ಇದರಿಂದ ಸರ್ಕಾರದಿಂದ ಸಿಗಬೇಕಾದ ನ್ಯಾಯಯುತ ಸವಲತ್ತುಗಳು ಸಮುದಾಯಕ್ಕೆ ತಲುಪುತ್ತಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಸುಮಾರು 35 ಲಕ್ಷ ಜನಸಂಖ್ಯೆ ಹೊಂದಿರುವ ಕುಂಚಿಟಿಗ ಸಮಾಜ ತನ್ನ ಅಸ್ತಿತ್ವ ಉಳಿಸಿಕೊಳ್ಳಬೇಕಾದರೆ ಸಮುದಾಯದ ಒಳಗಿನ ಒಗ್ಗಟ್ಟು ಅತ್ಯಗತ್ಯವಾಗಿದೆ ಎಂದು ಅವರು ಕರೆ ನೀಡಿದರು.

ಕುಂಚಿಟಿಗರನ್ನು ಕೇಂದ್ರದ ಓಬಿಸಿ ಪಟ್ಟಿಗೆ ಸೇರಿಸುವ ಕುರಿತು ರಾಜ್ಯ ಸಚಿವ ಸಂಪುಟ ಈಗಾಗಲೇ ಅನುಮೋದನೆ ನೀಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಆದ್ದರಿಂದ ಪ್ರಧಾನಮಂತ್ರಿಗಳು ಹಾಗೂ ರಾಜ್ಯದಿಂದ ಆಯ್ಕೆಯಾದ ಕೇಂದ್ರ ಸಚಿವರು ತಕ್ಷಣ ಗಮನಹರಿಸಿ ಕುಂಚಿಟಿಗ ಜನಾಂಗಕ್ಕೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿದರು.

ಪುಟ 02ಕ್ಕೆ....

## ಆರೋಗ್ಯ ಶಿಬಿರ-ಕಬ್ಬಡಿ ಪಂದ್ಯಾವಳಿ: ಶಾಸಕ ಧೀರಜ್ ಮುನಿರಾಜು ಚಾಲನೆ

### ಜನೋಪಯೋಗಿ ಕಾರ್ಯಕ್ರಮಗಳಿಗೆ ಚಾಲನೆ; 'ಅನ್ನದಾನಿ ನಾರಾಯಣಪ್ಪ' ಸೇವಾ ಪರಂಪರೆಗೆ ಗೌರವ



**ದೊಡ್ಡಬಳ್ಳಾಪುರ:** ಸಮಾಜಸೇವೆಗೆ ಹೆಸರಾಗಿದ್ದ ಕೀರ್ತಿಶೇಷ ಆರ್. ನಾರಾಯಣಪ್ಪ ಅವರ ಸ್ಮರಣಾರ್ಥ, ತಾಲ್ಲೂಕಿನ ತೂಬಗೆರೆ ಗ್ರಾಮದಲ್ಲಿ ಶನಿವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ರಾಜ್ಯಮಟ್ಟದ ಕಬ್ಬಡಿ ಪಂದ್ಯಾವಳಿ ಅರ್ಥಪೂರ್ಣವಾಗಿ ನಡೆಯಿತು.

ಇಲ್ಲಿನ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ಶಿಬಿರವನ್ನು ಶಾಸಕ ಧೀರಜ್ ಮುನಿರಾಜು ಉದ್ಘಾಟಿಸಿ ಮಾತನಾಡಿದರು. ತಮ್ಮ ಜೀವನಪೂರ್ತಿ ಸಮಾಜಸೇವೆಯಲ್ಲಿ ತೊಡಗಿಸಿ ಕೊಂಡಿದ್ದ ಆರ್. ನಾರಾಯಣಪ್ಪ ಅವರು ತೂಬಗೆರೆ ಭಾಗದಲ್ಲಿ 'ಅನ್ನದಾನಿ ನಾರಾಯಣಪ್ಪ' ಎಂದೇ ಖ್ಯಾತಿ ಪಡೆದಿದ್ದರು. ಅವರ ಅಗಲಿಕೆ ಸಮಾಜಕ್ಕೆ ಅಪಾರ ನಷ್ಟವಾದರೂ, ಅವರ ಸೇವಾ ಪರಂಪರೆ ಇಂತಹ ಜನೋಪಯೋಗಿ ಕಾರ್ಯಕ್ರಮಗಳ ಮೂಲಕ ಮುಂದುವರಿಯುತ್ತಿರುವುದು ಶ್ಲಾಘ ನೀಯ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ವೈ.ಕೆ.ಸಿ ಕಬ್ಬಡಿ ಕ್ಲಬ್ ವತಿಯಿಂದ ಆಯೋಜಿಸಿದ್ದ 'ಶ್ರೀ ಸಬ್ಸಿಡಿ ಆರ್. ನಾರಾಯಣಪ್ಪ ಕಪ್' ರಾಜ್ಯಮಟ್ಟದ ಕಬ್ಬಡಿ ಪಂದ್ಯಾವಳಿಗೆ ಚಾಲನೆ ನೀಡಲಾಯಿತು. ದೇವನಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಅಂಬರೀಶ್ ಗೌಡ ಮಾತನಾಡಿ, ಯುವಕರು ದುಶ್ಚಟಗಳಿಂದ ದೂರವಿರಲು ಕ್ರೀಡಾಕೂಟಗಳು ಅಗತ್ಯವೆಂದರು. ಇಲ್ಲಿ ಗೆಲುವು-ಸೋಲು ಮುಖ್ಯವಲ್ಲ, ಭಾಗವಹಿಸುವ ಮನೋಭಾವವೇ ಮುಖ್ಯ. ಕ್ರೀಡೆಯಲ್ಲಿ ಶಿಸ್ತು, ಪರಿಶ್ರಮ ಮತ್ತು ತಪಸ್ಸು ಅಡಗಿದೆ ಎಂದು ಹೇಳಿದರು.

ಆಕಾಶ್ ಆಸ್ಪತ್ರೆ, ಲಯನ್ಸ್ ಕ್ಲಬ್ ದೊಡ್ಡಬಳ್ಳಾಪುರ ಹಾಗೂ ಟಿ.ಎನ್. ಕೃಷ್ಣಪ್ಪ ಅವರ ಕುಟುಂಬಸ್ಥರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಉಚಿತ ಆರೋಗ್ಯ ಶಿಬಿರದಲ್ಲಿ ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ನೂರಾರು ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಪ್ರದೇಶದ ಸಾರ್ವಜನಿಕರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಕಾರ್ಯಕ್ರಮದಲ್ಲಿ ಬಿಜೆಪಿ ಹಿರಿಯ ಮುಖಂಡ ಹನುಮಂತರಾಯಪ್ಪ, ಕೆಪಿಸಿಸಿ ಸದಸ್ಯ ಮುನಿರಾಜು, ಘಾಟಿ ಪ್ರಾಧಿಕಾರ ಸದಸ್ಯ ರಂಗಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿಸಿದ್ದಪ್ಪ, ವಕೀಲ ಪ್ರತಾಪ್, ಓಬದೇನಹಳ್ಳಿ ಮುನಿಯಪ್ಪ, ನಿವೃತ್ತ ಯೋಧ ಅನಂತರಾಜ ಗೋಪಾಲ್, ಮುಖಂಡ ಬಿ.ಕೆ. ನಾರಾಯಣಸ್ವಾಮಿ, ಬಿಜೆಪಿ ಹೋಬಳಿ ಅಧ್ಯಕ್ಷ ಕೃಷ್ಣಪ್ಪ, ರೈತ ಮುಖಂಡ ವಾಸು, ಮುಖಂಡರಾದ ಕನಕದಾಸ, ಧನುಂಜಯ, ಮುನಿಕೃಷ್ಣಪ್ಪ, ಯುವ ಮುಖಂಡ ಉದಯ ಆರಾಧ್ಯ, ಮಧು, ನಿಖಿಲ್, ವಿನಯ್, ಲಯನ್ಸ್ ಕ್ಲಬ್ ಸದಸ್ಯರು, ಆಕಾಶ್ ಆಸ್ಪತ್ರೆಯ ಪ್ರತಿನಿಧಿಗಳು ಹಾಗೂ ಸ್ಥಳೀಯ ಗಣ್ಯರು ಉಪಸ್ಥಿತರಿದ್ದರು.

## ನೆಲಮಂಗಲ ಜೆಡಿಎಸ್ ಪಾಳಯದಲ್ಲಿ ಆಂತರಿಕ ಭಿನ್ನಮತ ಸ್ಫೋಟ

### ಮಾಜಿ ಶಾಸಕ ನಡೆಗೆ ತಳಮಟ್ಟದ ಕಾರ್ಯಕರ್ತರಲ್ಲಿ ಅಸಮಾಧಾನ; ನಾಯಕತ್ವ ಬದಲಾವಣೆಗೆ ಚರ್ಚೆ ತೀವ್ರ

**ನೆಲಮಂಗಲ:** ವಿಧಾನಸಭಾ ಕ್ಷೇತ್ರದಲ್ಲಿ ಜನತಾ ದಳ (ಜಾತ್ಯತೀತ) (ಜೆಡಿಎಸ್) ಪಾಳಯದಲ್ಲಿ ಆಂತರಿಕ ಭಿನ್ನಮತ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಪಕ್ಷದೊಳಗಿನ ಅಸಮಾಧಾನ ಬಹಿರಂಗವಾಗಿ ಹೊರಬರುತ್ತಿದೆ. ಮಾಜಿ ಶಾಸಕ ಶ್ರೀನಿವಾಸಮೂರ್ತಿ ಅವರ ಇತ್ತೀಚಿನ ನಡೆ ತಳಮಟ್ಟದ ಕಾರ್ಯಕರ್ತರಲ್ಲಿ ಭಾರೀ ಬೇಸರಕ್ಕೆ ಕಾರಣವಾಗಿದ್ದು, ಪಕ್ಷದೊಳಗಿನ ಒಗ್ಗಟ್ಟಿನ ಮೇಲೆ ಪ್ರಶ್ನಾರ್ಥಕ ಚಿಹ್ನೆ ಮೂಡಿಸಿದೆ.

### ಕಾಂಗ್ರೆಸ್ ಮುಖಂಡರ ಜೊತೆಗಿನ ಆತ್ಮೀಯತೆ ಅಸಮಾಧಾನ

ಮಾಜಿ ಶಾಸಕರು ಇತ್ತೀಚೆಗೆ ಕಾಂಗ್ರೆಸ್ ಶಾಸಕ ಶ್ರೀನಿವಾಸ್ ಅವರಿಗೆ ಆಪ್ತರಾಗಿರುವ ಬಿಎಂಎಲ್ ಕಾಂತರಾಜು ಅವರ ಹುಟ್ಟುಹಬ್ಬಕ್ಕೆ ಶುಭಕೋರಲು ಮನೆಗೆ ತೆರಳಿರುವುದು ಜೆಡಿಎಸ್ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ ವಿರುದ್ಧ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲೇ, ಮಾಜಿ ಶಾಸಕರು ಕಾಂಗ್ರೆಸ್ ಮುಖಂಡರಿಗೆ ಹಾರ-ತುರಾಯಿ ಹಾಕಿ ಗೌರವ ಸಲ್ಲಿಸಿರುವುದು ಜೆಡಿಎಸ್ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂಬ ಆರೋಪ ಕೇಳಿಬರುತ್ತಿದೆ.

### 'ನಿರಂತರ ನಿಂದನೆ-ಅವಮಾನ' - ಕಾರ್ಯಕರ್ತರ ಆಕ್ರೋಶ



ಪಕ್ಷದ ತಳಮಟ್ಟದ ಕಾರ್ಯಕರ್ತರು, "ನಾವು ಕ್ಷೇತ್ರದಲ್ಲಿ ಶಾಸಕರ ಯೋಜನೆಗಳ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ. ಆದರೆ ನಾಯಕತ್ವ ಮಟ್ಟದಲ್ಲಿ ನಡೆಯುತ್ತಿರುವ ನಡೆ ನಮ್ಮ ಹೋರಾಟವನ್ನು ದುರ್ಬಲಗೊಳಿಸುತ್ತಿದೆ. ನಿರಂತರ ನಿಂದನೆ ಮತ್ತು ಅವಮಾನಗಳಿಗೆ ನಾವು ಗುರಿಯಾಗುತ್ತಿದ್ದೇವೆ" ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮಾಜಿ ಶಾಸಕರ ಈ ನಡೆ



ಜೆಡಿಎಸ್ ಕಾರ್ಯಕರ್ತರ ಆತ್ಮಸ್ಥೈರ್ಯ ಕುಗ್ಗಿಸುತ್ತಿದೆ ಎಂದು ಆರೋಪಿಸಲಾಗಿದ್ದು, ಪಕ್ಷದೊಳಗಿನ ಅಸಮಾಧಾನ ಮತ್ತಷ್ಟು ಗಂಭೀರವಾಗುತ್ತಿದೆ.

### ಜೆಡಿಎಸ್ ವಾಟ್ಸಾಪ್ ಗುಂಪುಗಳಲ್ಲಿ ಬಿರುಸಿನ ಚರ್ಚೆ

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆ, ನೆಲಮಂಗಲ ಜೆಡಿಎಸ್ ವಾಟ್ಸಾಪ್ ಗುಂಪುಗಳಲ್ಲಿ ತೀವ್ರ ಚರ್ಚೆ ನಡೆಯುತ್ತಿದೆ. ಮಾಜಿ ಶಾಸಕರ ನಡೆಯನ್ನು ಸಮರ್ಥಿಸುವವರು ಮತ್ತು ವಿರೋಧಿಸುವವರ ನಡುವೆ ವಾಕ್ಸಮರ ನಡೆಯುತ್ತಿದ್ದು, ಪಕ್ಷದೊಳಗಿನ ವಿಭಜನೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಕೆಲವು ಕಾರ್ಯಕರ್ತರು ಈ ನಡೆ ಮುಂದುವರಿದರೆ ಪಕ್ಷದ ಭವಿಷ್ಯಕ್ಕೆ ಅಪಾಯ ಉಂಟಾಗಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

### ನಾಯಕತ್ವ ಬದಲಾವಣೆಗೆ ಚರ್ಚೆ

ಪಕ್ಷದೊಳಗಿನ ಅಸಮಾಧಾನ ತೀವ್ರಗೊಂಡ ಹಿನ್ನೆಲೆಯಲ್ಲಿ, ನೆಲಮಂಗಲ ಜೆಡಿಎಸ್ ಪಾಳಯದಲ್ಲಿ ನಾಯಕತ್ವ ಬದಲಾವಣೆಯ ಕುರಿತು ಚರ್ಚೆಗಳು ಆರಂಭವಾಗಿವೆ ಎಂಬ ಮಾಹಿತಿ ಲಭ್ಯವಾಗಿದೆ. ಕ್ಷೇತ್ರದಲ್ಲಿ ಹೊಸ ಮುಖ, ಹೊಸ ನಾಯಕತ್ವ ಅಗತ್ಯ ಎಂಬ ಧ್ವನಿಗಳು ಕೇಳಿಬರುತ್ತಿದ್ದು, ಪಕ್ಷದ ಹಿರಿಯರು ಈ ಬೆಳವಣಿಗೆಗಳ ಮೇಲೆ ಗಮನ ಹರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

### ಹಳೆಯ ವಿಡಿಯೋಗಳು ಮತ್ತೆ ವೈರಲ್

ಈ ನಡುವೆ, ಹಿಂದೆ ಬಿಎಂಎಲ್ ಕಾಂತರಾಜು ಅವರು ಮಾಜಿ ಶಾಸಕ ಶ್ರೀನಿವಾಸಮೂರ್ತಿ ವಿರುದ್ಧ ರೋಷಾವೇಶದಿಂದ ಮಾತನಾಡಿದ್ದ ಹಳೆಯ ವಿಡಿಯೋಗಳು ಇದೀಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. "ಶ್ರೀನಿವಾಸಮೂರ್ತಿ ನಂ.1 ಕಳ್ಳ, ನಮ್ಮ ಕುಟುಂಬದ ಹೆಸರನ್ನು ಎತ್ತಬೇಡ" ಎಂದು ಕಾಂತರಾಜು ಆಕ್ರೋಶದಿಂದ ಕೂಗಾಡಿದ್ದ ದೃಶ್ಯಗಳು ಮತ್ತೆ ಚರ್ಚೆಗೆ ಬಂದಿದ್ದು, ಜೆಡಿಎಸ್ ಒಳಗಿನ ಗೊಂದಲವನ್ನು ಇನ್ನಷ್ಟು ತೀವ್ರಗೊಳಿಸಿದೆ.

ನೆಲಮಂಗಲದಲ್ಲಿ ಈಗಾಗಲೇ ರಾಜಕೀಯ ಸ್ಪರ್ಧೆ ತೀವ್ರವಾಗಿರುವ ಸಂದರ್ಭದಲ್ಲಿ, ಜೆಡಿಎಸ್ ಪಾಳಯದ ಈ ಆಂತರಿಕ ಭಿನ್ನಮತ ಪಕ್ಷದ ಸಂಘಟನಾ ಬಲಕ್ಕೆ ದೊಡ್ಡ ಹೊಡೆತ ನೀಡುವ ಸಾಧ್ಯತೆ ಇದೆ. ನಾಯಕತ್ವದ ನಿರ್ಧಾರ ಮತ್ತು ಮುಂದಿನ ನಡೆ ಪಕ್ಷದ ಭವಿಷ್ಯವನ್ನು ನಿರ್ಧರಿಸಲಿದೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ.

## ಮಹಿಳಾ ನಾಯಕಿಯ ಗ್ರ್ಯಾಂಡ್ ಎಂಟ್ರಿ ಫಿಕ್ಸ್!?

ನೆಲಮಂಗಲ ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸುವ ಬೆಳವಣಿಗೆಗಳು ನಡೆಯುತ್ತಿದ್ದು, ಮಾಜಿ ಹಾಗೂ ಹಾಲಿ ಶಾಸಕರಿಗೆ ಸವಾಲಾಗುವ ಮಹಿಳಾ ನಾಯಕಿಯ ಎಂಟ್ರಿ ಬಹುತೇಕ ಖಚಿತವಾಗಿದೆ ಎನ್ನುವ ಮಾತುಗಳುಕೇಳಿಬರುತ್ತಿವೆ. ಈಗಾಗಲೇ ರಾಜ್ಯ ಮಟ್ಟದಲ್ಲಿ ಈ ಕುರಿತು ಒಳಚರ್ಚೆಗಳು ನಡೆಯುತ್ತಿದ್ದು, ಕೆಲವು ಪ್ರಭಾವಿ ನಾಯಕರು ಈ ಬೆಳವಣಿಗೆಯನ್ನು ಸಮೀಪದಿಂದ ಗಮನಿಸುತ್ತಿದ್ದಾರೆ ಎನ್ನಲಾಗಿದೆ.

ಕೆಲವೇ ದಿನಗಳಲ್ಲಿ ಆ ಮಹಿಳೆ ನೇರವಾಗಿ ಫೀಲ್ಡ್‌ಗೆ ಇಳಿಯಲಿದ್ದಾರೆ ಎಂಬ ಮಾಹಿತಿ ರಾಜಕೀಯ ವಲಯದಲ್ಲಿ ಹರಿದಾಡುತ್ತಿದ್ದು, ಸದ್ಯ ತಯಾರಿ ಹಂತ ಅಂತಿಮ ಹಂತ ತಲುಪಿದೆ ಎನ್ನಲಾಗುತ್ತಿದೆ.

ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಚುನಾವಣೆಗಳಿಗೆ ಮುನ್ನವೇ ಈ ಗ್ರ್ಯಾಂಡ್ ಎಂಟ್ರಿಗೆ ದೊಡ್ಡ ರಾಜಕೀಯ ವೇದಿಕೆ ಸಜ್ಜಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿವೆ.

ಕ್ಷೇತ್ರದಲ್ಲಿ ಆಕೆಯ ಪ್ರವೇಶವು ಹಾಲಿ ರಾಜಕೀಯ ಸಮೀಕರಣಗಳನ್ನು ಸಂಪೂರ್ಣವಾಗಿ ಬದಲಾಯಿಸಬಹುದೆಂಬ ಲೆಕ್ಕಾಚಾರ ಆರಂಭವಾಗಿದೆ. ಈ ಮಹಿಳಾ ನಾಯಕಿಯ ಎಂಟ್ರಿಯಿಂದ ಮೂರು ಪ್ರಮುಖ ಪಕ್ಷಗಳಲ್ಲೂ ಒಳಚರ್ಚೆ, ತಂತ್ರ ಬದಲಾವಣೆ ಮತ್ತು ಆತಂಕ ಶುರುವಾಗಿರುವುದು ಸ್ಪಷ್ಟವಾಗಿದೆ. ಯಾರು ಆ ಮಹಿಳೆ? ಯಾವ ಪಕ್ಷದಿಂದ ಎಂಟ್ರಿ? ಯಾರ ಬೆಂಬಲ? ಇದು ರಾಜಕೀಯ ತಂತ್ರವೇ ಅಥವಾ ಹೊಸ ಅಧ್ಯಾಯದ ಆರಂಭವೇ? ಎಂಬ ಪ್ರಶ್ನೆಗಳು ಕ್ಷೇತ್ರದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿವೆ. ಈ ಎಲ್ಲ ಪ್ರಶ್ನೆಗಳಿಗೆ ಶೀಘ್ರದಲ್ಲೇ ದಾಖಲೆಗಳು ಮತ್ತು ಸಾಕ್ಷಿಗಳೊಂದಿಗೆ ಸ್ಪಷ್ಟ ಉತ್ತರ ಹೊರಬೀಳಲಿದೆ ಎಂದು ಮೂಲಗಳು ತಿಳಿಸಿವೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

## ಉಪಜಾತಿಗಳಲ್ಲಿ ವಿಭಜಿಸದೇ ಒಂದೇ ಶಕ್ತಿಯಾಗಿ ಸಂಘಟಿತರಾಗಬೇಕೆಂದು ದೇವಾಂಗ ಸಮುದಾಯಕ್ಕೆ ಸಿಎಂ ಕರೆ

ಪುಟ 02ಕ್ಕೆ.... 2004-05ರಲ್ಲಿ ಹಣಕಾಸು ಸಚಿವರಾಗಿದ್ದ ಸಂದರ್ಭದಲ್ಲಿ ನೇಕಾರರಿಗೆ ನೀಡುತ್ತಿದ್ದ ವಿದ್ಯುತ್ ದರವನ್ನು ಯೂನಿಟ್‌ಗೆ ₹4.20ರಿಂದ ₹1.20ಕ್ಕೆ ಇಳಿಸಲಾಗಿತ್ತು. ಇದರಿಂದ ಶೇ.80ರಷ್ಟು ನೇಕಾರರಿಗೆ ಲಾಭವಾಗಿತ್ತು ಎಂದು ಸ್ಮರಿಸಿದರು. ಪ್ರಸ್ತುತ 20 ಹೆಚ್‌ಪಿ ವರೆಗೆ ರಿಯಾಯಿತಿ ದರದ ವಿದ್ಯುತ್, ಶೂನ್ಯ ಬಡ್ಡಿದರದಲ್ಲಿ ₹5 ಲಕ್ಷವರೆಗೆ ಸಾಲ, ನೇಕಾರ ಸಮ್ಮಾನ ಯೋಜನೆ, ದೇವರದಾಸಿಮಯ್ಯ ಹಾಗೂ ವಚನಕಾರರ ಜಯಂತಿಗಳನ್ನು ಸರ್ಕಾರ ಆರಂಭಿಸಿದೆ ಎಂದು ಹೇಳಿದರು. ನೇಕಾರರ ಅಭಿವೃದ್ಧಿ ನಿಗಮ ಸ್ಥಾಪನೆ ಕುರಿತು ಬೇಡಿಕೆ ಬಂದಿದ್ದು, ಇದನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದರು.

## ಕೇಂದ್ರದ ಓಬಿಸಿ ಪಟ್ಟಿಗೆ ಸೇರಿಸುವಲ್ಲಿ ವಿಳಂಬ; ಅಸ್ತಿತ್ವ ಉಳಿಸಲು ಒಳಒಗ್ಗಟ್ಟು ಅಗತ್ಯ

ಪುಟ 02ಕ್ಕೆ.... ಇದೇ ಸಂದರ್ಭದಲ್ಲಿ ನೆಲಮಂಗಲ ಕುಂಚಿಟಿಗ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ನಾಗೇಶ್ ಮಾತನಾಡಿ, ಸಮಾಜದ ಅಭಿವೃದ್ಧಿಯಲ್ಲಿ ಸರ್ಕಾರಿ ನೌಕರರ ಪಾತ್ರ ಮಹತ್ವದ್ದಾಗಿದೆ ಎಂದರು.

ಕುಂಚಿಟಿಗ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಸೂಕ್ತ ಮೀಸಲಾತಿ ಸಿಗಬೇಕಾದರೆ ಮೂಲ ಅಸ್ತಿತ್ವವನ್ನು ಬಿಟ್ಟುಕೊಡಬಾರದು. ಪ್ರತಿಯೊಬ್ಬರೂ ತಮ್ಮ ಗುರುತನ್ನು ಉಳಿಸಿಕೊಳ್ಳುವ ಕುರಿತು ಜಾಗೃತರಾಗಬೇಕು. ಸಂಘಟನೆಯ ಮೂಲಕವೇ ಹಕ್ಕುಗಳನ್ನು ಪಡೆಯಲು ಸಾಧ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ನೆಲಮಂಗಲ ತಾಲೂಕು ಕುಂಚಿಟಿಗ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎನ್. ನಾಗೇಶ್, ನೆಲಮಂಗಲ ಕುಂಚಿಟಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಜಿ. ಭೀಮರಾಜು, ಸಮಾಜದ ಮುಖಂಡರಾದ ನೀಲಯ್ಯ, ಅಂಜಿನಪ್ಪ, ಗೋವಿಂದರಾಜು, ರಾಜ್ಯ ಉಪಾಧ್ಯಕ್ಷ ರಾಮಾಂಜಿನಪ್ಪ, ಸಂಘಟನಾ ಕಾರ್ಯದರ್ಶಿ ಶೇಷಾಚಲಮೂರ್ತಿ, ಪ್ರಧಾನ ಕಾರ್ಯದರ್ಶಿ ರಂಗರಾಜು, ಖಜಾಂಚಿ ವೆಂಕಟೇಶ್, ಬಿ. ಶೈಲಜಾ, ಹೆಚ್.ವಿ. ನಾಗರಾಜು, ಬೊಗಣ್ಣ, ಪ್ರಕಾಶ್, ತಿಮ್ಮೇಗೌಡ, ಸಂಚಾಲಕರು ಸಂಪತ್ ಕುಮಾರ್, ರಮೇಶ್, ಜಗದಾಂಬ ರಾಜಣ್ಣ, ಅರುಣ್, ಮಂಜುನಾಥ್, ಲಕ್ಷ್ಮಿಪತಿ, ಸಿದ್ದಗಂಗಯ್ಯ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸುದ್ದಿ ಹಾಗೂ ಜಾಹೀರಾತುಗಳಿಗೆ ಸಂಪರ್ಕಿಸಿ
9538786812
8217606793

## RCB ಅಭಿಮಾನಿಗಳಿಗೆ ಡಬಲ್ ಖುಷಿ: ಜೆರ್ಸಿಗೆ ನಂದಿನಿ ಎಂಟ್ರಿ ಸಾಧ್ಯತೆ

ಬೆಂಗಳೂರು: ಕರ್ನಾಟಕದ ಸಹಕಾರ ಚಳವಳಿಯ ಪ್ರತೀಕವಾಗಿರುವ 'ನಂದಿನಿ' ಬ್ರ್ಯಾಂಡ್ ಇದೀಗ ದೇಶದ ಅತಿ ದೊಡ್ಡ ಕ್ರಿಕೆಟ್ ವೇದಿಕೆಯಾಗಿರುವ ಐಪಿಎಲ್‌ನಲ್ಲಿ ತನ್ನ ಗುರುತು ಮೂಡಿಸಲು ಸಜ್ಜಾಗಿದೆ. ನಂದಿನಿ ಬ್ರ್ಯಾಂಡ್ ಅಡಿಯಲ್ಲಿ ಹಾಲು ಹಾಗೂ ಹಾಲು ಉತ್ಪನ್ನಗಳನ್ನು ಮಾರುಕಟ್ಟೆಗಿಳಿಸುವ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್), ಇಂಡಿಯನ್ ಪ್ರೀಮಿಯರ್ ಲೀಗ್ 2026 ಹಂಗಾಮಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಜೊತೆ ಪ್ರಾಯೋಜಕತ್ವದ ಒಪ್ಪಂದಕ್ಕೆ ಮುಂದಾಗಿದೆ.

ಈ ಮೂಲಕ ಕಳೆದ ಋತುವಿನಲ್ಲಿ ಆರ್‌ಸಿಬಿಯ 'ಡೈರಿ ಪಾಲುದಾರ'ರಾಗಿದ್ದ ಗುಜರಾತ್ ಮೂಲದ ಅಮೂಲ್‌ಗೆ ಗೇಟ್‌ಪಾಸ್ ಸಿಗುವ ಸಾಧ್ಯತೆಗಳು ಹೆಚ್ಚಾಗಿವೆ.

### ನಂದಿನಿ: ಒಂದು ಬ್ರ್ಯಾಂಡ್ ಅಲ್ಲ, ಒಂದು ಚಳವಳಿ

1970ರ ದಶಕದಲ್ಲಿ ಆರಂಭವಾದ ಕರ್ನಾಟಕದ ಹಾಲು ಸಹಕಾರ ಚಳವಳಿ, ಹಳ್ಳಿಗಳ ಹಾಲು ಉತ್ಪಾದಕರಿಗೆ ನೇರ ಆರ್ಥಿಕ ಶಕ್ತಿ ನೀಡುವ ಉದ್ದೇಶ ಹೊಂದಿತ್ತು. ಇದೇ ಚಳವಳಿಯ ಫಲವಾಗಿ ಹುಟ್ಟಿದ 'ನಂದಿನಿ' ಬ್ರ್ಯಾಂಡ್, ಇಂದು ಕರ್ನಾಟಕದ ಮನೆಮಾತಾಗಿದೆ. ಹಾಲಿನಿಂದ ಹಿಡಿದು ಮೊಸರು, ಬೆಣ್ಣೆ, ತುಪ್ಪ, ಐಸ್‌ಕ್ರೀಮ್‌ವರೆಗೆ ನಂದಿನಿ ಉತ್ಪನ್ನಗಳು "ಸ್ಥಳೀಯ ಉತ್ಪಾದನೆ-ಸ್ಥಳೀಯ ಬಳಕೆ" ತತ್ವದ ಮೇಲೆ ಬೆಳೆದಿವೆ.

ಸಾವಿರಾರು ಹಾಲು ಉತ್ಪಾದಕ ರೈತ ಕುಟುಂಬಗಳ ಬದುಕಿನ ಆಧಾರವಾಗಿರುವ ನಂದಿನಿ, ಕೇವಲ ವಾಣಿಜ್ಯ ಬ್ರ್ಯಾಂಡ್ ಆಗಿರದೇ, ಸಹಕಾರದ ಯಶೋಗಾಥೆಯಾಗಿ




ಗುರುತಿಸಿಕೊಂಡಿದೆ.

### ಆರ್‌ಸಿಬಿ ಮತ್ತು ಬೆಂಗಳೂರು: ಭಾವನಾತ್ಮಕ ಸಂಬಂಧ

2008ರಲ್ಲಿ ಐಪಿಎಲ್ ಆರಂಭವಾದಾಗಿನಿಂದಲೇ ಆರ್‌ಸಿಬಿ ತಂಡಕ್ಕೆ ಬೆಂಗಳೂರು ನಗರದೊಂದಿಗೆ ಭಾವನಾತ್ಮಕ ಸಂಬಂಧವಿದೆ. "ಈ ಸಲ ಕಪ್ ನಮ್ಮದೇ" ಎಂಬ ಘೋಷಣೆಯೊಂದಿಗೆ ಅಭಿಮಾನಿಗಳ ನಂಬಿಕೆ, ನಿರೀಕ್ಷೆ, ಹೋರಾಟ—ಎಲ್ಲಾ ಸೇರಿ RCBಗೆ ವಿಶಿಷ್ಟ ಗುರುತನ್ನು ನೀಡಿವೆ.

ಇಂತಹ ಸಂದರ್ಭದಲ್ಲಿ, ಕರ್ನಾಟಕದ ಸ್ವಂತ ಬ್ರ್ಯಾಂಡ್ ನಂದಿನಿ ಆರ್‌ಸಿಬಿ ಜೆರ್ಸಿಯಲ್ಲಿ ಕಾಣಿಸಿಕೊಂಡರೆ, ಅದು ಕೇವಲ ಪ್ರಾಯೋಜಕತ್ವವಲ್ಲ; ಬೆಂಗಳೂರು-ಕರ್ನಾಟಕ ಹೆಮ್ಮೆಯ ಪ್ರತಿನಿಧಿತ್ವ ಎನ್ನುವ ಸಂದೇಶವನ್ನು ಹೊತ್ತು ತರುತ್ತದೆ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.

### 'ಅಧಿಕೃತ ಡೈರಿ ಪಾಲುದಾರ' ಸ್ಥಾನಕ್ಕೆ ಕೆಎಂಎಫ್ ಆಸಕ್ತಿ

ಐಪಿಎಲ್ 2026 (ಸೀಸನ್-19)ಕ್ಕೆ ಸಂಬಂಧಿಸಿದಂತೆ, ಆರ್‌ಸಿಬಿಯ 'ಅಧಿಕೃತ ಡೈರಿ ಪಾಲುದಾರ' ಸ್ಥಾನ ಪಡೆಯಲು ಕೆಎಂಎಫ್ ಅಧಿಕೃತ ಆಸಕ್ತಿ ತೋರಿಸಿದೆ. ಈ ಹಕ್ಕುಗಳನ್ನು ಪಡೆದು ಜಾರಿಗೆ ತರಲು ಏಜೆನ್ಸಿ ನೇಮಕ ಮಾಡುವ ಉದ್ದೇಶದಿಂದ ಇತ್ತೀಚೆಗೆ ಟೆಂಡರ್ ಆಹ್ವಾನಿಸಿರುವುದು ಈ ಯೋಜನೆಯ ಗಂಭೀರತೆಯನ್ನು ಸೂಚಿಸುತ್ತದೆ.

ಈ ಒಪ್ಪಂದವು ಐಪಿಎಲ್, ಬಿಸಿಸಿಐ ಮತ್ತು ಫ್ರಾಂಚೈಸ್‌ನ ನಿಯಮಾವಳಿಗಳಿಗೆ ಒಳಪಟ್ಟು ಜಾರಿಗೆ ಬರಲಿದೆ ಎಂದು ಮೂಲಗಳು ತಿಳಿಸಿವೆ.

### ಅಮೂಲ್ ಔಟ್? ಬ್ರ್ಯಾಂಡ್ ರಾಜಕಾರಣ ಆರಂಭ

ಕಳೆದ ಕೆಲವು ವರ್ಷಗಳಿಂದ ಐಪಿಎಲ್‌ನಲ್ಲಿ ಅಮೂಲ್ ತನ್ನ ಪ್ರಭಾವ ಬೀರಿತ್ತು. ಆದರೆ ರಾಜ್ಯದ ಸ್ವಂತ ತಂಡಕ್ಕೆ ರಾಜ್ಯದ ಸ್ವಂತ ಬ್ರ್ಯಾಂಡ್ ಬರಬೇಕೆಂಬ ಒತ್ತಡ, ಭಾವನಾತ್ಮಕ ಅಭಿಮಾನಿ ಅಭಿಪ್ರಾಯ ಹಾಗೂ 'ವೋಕಲ್ ಫಾರ್ ಲೋಕಲ್' ತತ್ವ ಎಲ್ಲಾ ಸೇರಿ ಈ ಬದಲಾವಣೆಗೆ ಕಾರಣವಾಗುತ್ತಿದೆ ಎನ್ನಲಾಗುತ್ತಿದೆ.

## ಮೂರನೆಯದೂ ಹೆಣ್ಣು ಮಗು ಎಂಬ ಕಾರಣಕ್ಕೆ ಪತ್ನಿ, ಮಕ್ಕಳನ್ನು ಬಿಟ್ಟು ಪರಾರಿಯಾದ ಪತಿ



**ಬೆಂಗಳೂರು:** ಮೂರನೇ ಮಗುವೂ ಹೆಣ್ಣಾಗಿದ್ದಕ್ಕೆ ತನ್ನ ಪತ್ನಿ ಹಾಗೂ ಹಸುಗೂಸು ಸೇರಿದಂತೆ ಮೂವರು ಹೆಣ್ಣು ಮಕ್ಕಳನ್ನು ನಡುಬೀದಿಯಲ್ಲಿ ಬಿಟ್ಟು ಪತಿಯೊಬ್ಬ ಪರಾರಿಯಾಗಿರುವ ಘಟನೆ ಸಿಲಿಕಾನ್ ಸಿಟಿಯಲ್ಲಿ ನಡಿದಿದೆ.ಈ ಸಂಬಂಧ ಬೆಂಗಳೂರಿನ ಈಶಾನ್ಯ ವಿಭಾಗದ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

### ಪ್ರೀತಿಸಿ ಮದುವೆಯಾಗಿದ್ದ ಹರೀಶ್-ವರಲಕ್ಷ್ಮೀ

ಮೂಲತಃ ರಾಜಸ್ಥಾನದವನಾದ ಹರೀಶ್ ಬೆಂಗಳೂರಿನಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಗಿ ಕೆಲಸ ಮಾಡುತ್ತಿದ್ದ. ಈತ ಬೆಂಗಳೂರಿನಲ್ಲಿ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡುತ್ತಿದ್ದ ವರಲಕ್ಷ್ಮೀ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗಿದ್ದ. ಮದುವೆಯ ಆರಂಭದ ದಿನಗಳಲ್ಲಿ ಇವರ ಜೀವನ ಸಾನನ್ಯವಾಗಿತ್ತು. ಮೊದಲ ಇಬ್ಬರು ಮಕ್ಕಳು ಹೆಣ್ಣಾದಾಗಲೂ ಹರೀಶ್ ಅಷ್ಟಾಗಿ ಅಸಮಾಧಾನ ತೋರ್ಪಡಿಸಿರಲಿಲ್ಲ. ಆದರೆ, ಆದರೆ ಮೂರನೆಯದು ಗಂಡು ಮಗುವಾಗಬೇಕು ಎಂಬ ಹಂಬಲ ಆತನಲ್ಲಿತ್ತು.

### ಮೂರನೇ ಹೆರಿಗೆ ಬಳಿಕ ಶುರುವಾಯ್ತು ಅಸಲಿ ಬಣ್ಣ

ಮೂರನೇ ಬಾರಿಗೆ ಪತ್ನಿ ಗರ್ಭಿಣಿಯಾದಾಗ ಹರೀಶ್ ಗಂಡು ಮಗುವಿನ ನಿರೀಕ್ಷೆಯಲ್ಲಿದ್ದ. ಆದರೆ, ಕಳೆದ ಒಂದೂವರೆ ತಿಂಗಳ ಹಿಂದೆ ವರಲಕ್ಷ್ಮೀ ಮತ್ತೆ ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. ಯಾವಾಗ ಮೂರನೇ ಮಗುವೂ ಹೆಣ್ಣಾಯಿತು ಎಂದು ಗೊತ್ತಾಯಿತೋ, ಅಂದಿನಿಂದ ಹರೀಶ್ ತನ್ನ ಬುದ್ಧಿ ತೋರಿಸಲಾರಂಭಿಸಿದ್ದಾನೆ. ಹಸುಗೂಸಿನ ಮುಖವನ್ನೂ ನೋಡದ ಈತ, ಈಗ ಪತ್ನಿ ಮತ್ತು ಮಕ್ಕಳನ್ನು ತೊರೆದು ನಾಪತ್ತೆಯಾಗಿದ್ದಾನೆ.

### ಪತ್ನಿಯ ಗಂಭೀರ ಆರೋಪ ಅಕ್ರಮ ಸಂಬಂಧದ ಶಂಕೆ

ಪತಿ ಕೈಕೊಟ್ಟ ಬೆನ್ನಲ್ಲೇ ವರಲಕ್ಷ್ಮೀ ಪೊಲೀಸರಿಗೆ ದೂರು ನೀಡಿದ್ದು, ನನ್ನ ಪತಿ ಮೂವರು ಹೆಣ್ಣು ಮಕ್ಕಳಾದರು ಎಂಬ ಕಾರಣಕ್ಕೆ ನಮ್ಮನ್ನು ಬಿಟ್ಟು ಹೋಗಿದ್ದಾರೆ. ಮಾತ್ರವಲ್ಲದೆ, ಅವರು ಈಗ ಮತ್ತೊಬ್ಬ ಮಹಿಳೆಯೊಂದಿಗೆ ವಾಸವಾಗಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.


ಪ್ರಸ್ತುತ ವರಲಕ್ಷ್ಮೀ ಅವರ ಪರಿಸ್ಥಿತಿ ಶೋಚನೀಯವಾಗಿದ್ದು, ಕೈಯಲ್ಲಿ ಒಂದೂವರೆ ತಿಂಗಳ ಹಸುಗೂಸು ಇದೆ. ಇತರ ಇಬ್ಬರು ಮಕ್ಕಳ ಶಾಲಾ ಶುಲ್ಕ ಕಟ್ಟಲು ಹಣವಿಲ್ಲ. ಮನೆ ಬಾಡಿಗೆ ಕೊಡಲು ಸಾಧ್ಯವಾಗುತ್ತಿಲ್ಲ. ಮಕ್ಕಳನ್ನು ಸಾಕುವುದೇ ಅಸಾಧ್ಯವಾಗಿದೆ ಎಂದು ಕಣ್ಣೀರಿಟ್ಟಿದ್ದಾರೆ. ಒಂದು ತಿಂಗಳ ಹಿಂದೆಯೇ ಈಶಾನ್ಯ ವಿಭಾಗದ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ, ಪೊಲೀಸರು ಈವರೆಗೆ ಹರೀಶ್‌ನನ್ನು ಪತ್ತೆ ಹಚ್ಚುವಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವರಲಕ್ಷ್ಮೀ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

## ವಶೀಕರಣ ಜಾಹೀರಾತು ನೋಡಿ ಲಕ್ಷ ಲಕ್ಷ ಕಳೆದುಕೊಂಡ ಯುವತಿ.!

**ಬೆಂಗಳೂರು:** ಸೋಷಿಯಲ್ ಮೀಡಿಯಾ ದಲ್ಲಿ ಹರಿದಾಡುವ ಆನ್‌ಲೈನ್ ವಶೀಕರಣ ಜಾಹೀರಾತುಗಳು ಹೇಗೆ ಜನರ ನಂಬಿಕೆಯನ್ನು ದುರುಪಯೋ ಗಪಡಿಸಿಕೊಂಡು ಲಕ್ಷಾಂತರ ಹಣ ದೋಚುತ್ತಿವೆ ಎಂಬುದಕ್ಕೆ ಮತ್ತೊಂದು ಉದಾಹರಣೆ ಬೆಂಗಳೂರಿನಲ್ಲಿ ಬೆಳಕಿಗೆ ಬಂದಿದೆ. ಪ್ರೀತಿಸಿದ ಯುವಕ ಸಿಗುವಂತೆ ಮಾಡುತ್ತೇವೆ, ಮದುವೆ ಖಚಿತ ಎಂದು ನಂಬಿಸಿ ಯುವತಿಯೊಬ್ಬಳಿಂದ ಹಂತ ಹಂತವಾಗಿ ಲಕ್ಷಾಂತರ ಹಣ ವಸೂಲಿ ಮಾಡಿದ ಪ್ರಕರಣ ಆಡುಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಪ್ರೀತಿಯಲ್ಲಿ ನೊಂದಿದ್ದ ಯುವತಿಯೊಬ್ಬಳು ಇನ್‌ಸ್ಟಾಗ್ರಾಂನಲ್ಲಿ ಕಾಣಿಸಿಕೊಂಡ ವಶೀಕರಣ ಜಾಹೀರಾತಿಗೆ ಮಾರುಹೋಗಿದ್ದಾಳೆ. "ಕಷ್ಟಕ್ಕೆ ಪರಿಹಾರ", "ಪ್ರೀತಿಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ", "ಮದುವೆ ಖಚಿತ" ಎಂಬ ಜಾಹೀರಾತು ಆಕೆಯ ಗಮನ ಸೆಳೆದಿತ್ತು. ಜಾಹೀರಾತಿನಲ್ಲಿ ನೀಡಿದ್ದ ಫೋನ್ ಸಂಖ್ಯೆಗೆ (9741336337) ಕರೆ ಮಾಡಿದ ಯುವತಿ ತನ್ನ ಸಮಸ್ಯೆಯನ್ನು ವಿವರಿಸಿದ್ದಾಳೆ.

ಈ ವೇಳೆ ತಮ್ಮನ್ನು 'ಚಂದ್ರಶೇಖರ್ ಸುಗತ್ ಗುರೂಜಿ' ಎಂದು ಪರಿಚಯಿಸಿಕೊಂಡ ವ್ಯಕ್ತಿ ಮಾತನಾಡಿದ್ದು, ಯುವತಿಯ ಪ್ರೀತಿಸಿದ ಯುವಕನ




ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾನೆ. ಯುವತಿ "ನಾನು ಪ್ರೀತಿಸಿದ ವ್ಯಕ್ತಿ ನನಗೆ ಸಿಗುತ್ತಾನಾ? ಮದುವೆ ಆಗುತ್ತಾ?" ಎಂದು ಪ್ರಶ್ನಿಸಿದಾಗ, ಗುರೂಜಿ "ಖಂಡಿತ ಸಿಗುತ್ತಾನೆ, ಮದುವೆಯೂ ಆಗುತ್ತದೆ. ಆದರೆ ಸ್ವಲ್ಪ ಹಣ ಖರ್ಚಾಗುತ್ತದೆ" ಎಂದು ಭರವಸೆ ನೀಡಿದ್ದಾನೆ.

ಮೊದಲಿಗೆ ಸಣ್ಣ ಮೊತ್ತದ ಹಣ ಕೇಳಿ ನಂಬಿಕೆ ಗಳಿಸಿದ ಆರೋಪಿ, ನಂತರ ಹಂತ ಹಂತವಾಗಿ ಹಣ ವರ್ಗಾಯಿಸಲು ಯುವತಿಗೆ ಒತ್ತಡ ಹಾಕಿದ್ದಾರೆ. ಆನ್‌ಲೈನ್ ಮೂಲಕ ವಿವಿಧ ಕಾರಣಗಳನ್ನು ಹೇಳಿ ಸುಮಾರು 2.05 ಲಕ್ಷ ರೂಪಾಯಿ ಹಣವನ್ನು ಯುವತಿಯಿಂದ ಪಡೆದುಕೊಂಡಿದ್ದಾರೆ. ಪ್ರತಿ ಬಾರಿ ಹೊಸ ಪೂಜೆ, ಹೊಸ ವಶೀಕರಣ ಎಂಬ ನೆಪ ಹೇಳಿ ಹಣ ಕೇಳಲಾಗಿದೆ.

ಆದರೆ ಕೆಲ ದಿನಗಳ ಬಳಿಕ ಏಕಾಏಕಿ 4 ಲಕ್ಷ ರೂಪಾಯಿ ಹಣ ಕೇಳಿದಾಗ ಯುವತಿಗೆ ಅನುಮಾನ ಶುರುವಾಗಿದೆ. ತಾನು ಮೋಸ ಹೋಗುತ್ತಿದ್ದೇನೆಂದು ಅರಿತ ಯುವತಿ ಗುರೂಜಿಗೆ ಪ್ರಶ್ನೆ ಮಾಡಿದ್ದು, ಇದುವರೆಗೂ ನೀಡಿದ ಹಣವನ್ನು ವಾಪಸ್ ನೀಡುವಂತೆ ಕೇಳಿದ್ದಾಳೆ. ಆದರೆ ಆರೋಪಿಗಳು ಹಣ ನೀಡಲು ನಿರಾಕರಿಸಿದ್ದು, "ಏನು ಮಾಡ್ತಿಯೋ ಮಾಡಿಕೋ" ಎಂದು ಧಮ್ಕಿ ಹಾಕಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಇದರಿಂದ ಆತಂಕಗೊಂಡ ಯುವತಿ ಆಡುಗೋಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾಳೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. 'ಕೃಷ್ಣಮೂರ್ತಿ ಗುರೂಜಿ' ಎಂಬ ಹೆಸರಿನ ಸೋಷಿಯಲ್ ಮೀಡಿಯಾ ಖಾತೆ ಹಾಗೂ ಸಂಪರ್ಕ ಸಂಖ್ಯೆಗಳ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ.




## ವಿದ್ಯೆ ಹುಲಿ ಹಾಲಿನಂತೆ ಘರ್ಜಿಸಲು ಶಿಕ್ಷಣ ಕ್ಷೇತ್ರದಲ್ಲಿ ಪ್ರಗತಿಹೊಂದಿ:- ನರಸಿಂಹರಾಜು



**ದೇವನಹಳ್ಳಿ:**-ಮಾದಿಗ ಜನಾಂಗದ ರಥ ಮುನ್ನಡೆಸಲು ಯುವ ಪೀಳಿಗೆ ಜನಾಂಗ ವನ್ನು ಸಮರ್ಥ ವಾಗಿ ಸಂಘಟಿಸಲ ಬೇಕೆಂದು ಬಿಎಂಟಿಸಿ ನಿವೃತ ಅದಿಕಾರಿ ನರಸಿಂಹರಾಜು ಅಭಿಪ್ರಾಯಿಸಿದರು.

ಪಟ್ಟಣದ ಪ್ರವಾಸಿ ಮಂದಿರಲ್ಲಿ ಶ್ರೀ ಮಾತಂಗ ಮಹರ್ಷಿ ಸೇವಾ ಟ್ರಸ್ಟ್ ನಿಂದ 2026ನೇ ಸಾಲಿನ ಕ್ಯಾಲೇಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವ ಹಿಸಿ ಮಾತನಾಡಿ, ದೇಶದಲ್ಲಿ ಮಾದಿಗ ಜನಾಂಗದ ಶಕ್ತಿ ಶೇ.50 ಕುಂಠಿತಗೊಂಡಿದ್ದು ಸವರ್ಣಿ ಯರು ಸಾವಿರ ಪಟ್ಟು ಮುಂದಿವೆ ಹಾಗಾಗಿ ನಮ್ಮಲ್ಲಿ ಅಧಿಕಾರ, ಸಂಪತ್ತು, ಶಿಕ್ಷಣ, ರಾಜಕೀಯ ಕ್ಷೇತ್ರದಲ್ಲಿ ಹಿಂದುಳಿದಿ ದ್ದೇವೆ. ಗ್ರಾಮೀಣ ಪ್ರದೇಶದಲ್ಲಿ ಯುವ ಪೀಳಿಗೆ ಅನೇಕ ದುಶ್ಚಟಗಳಿಗೆ ಬಲಿಯಾಗಿ ಸಮಯ ವ್ಯರ್ಥ ಮಾಡುತಿದ್ದಾರೆ.

ಮಹಾರಾಷ್ಟ್ರದ ಒಬ್ಬ ಮಹಾನ್ ಸಾಮಾಜಿಕ ಸುಧಾರಕರು, ಚಿಂತಕರು, ಮತ್ತು ಬರಹಗಾರರು, ಇವರು 19ನೇ ಶತಮಾನದಲ್ಲಿ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ, ಮತ್ತು ಲಿಂಗ ತಾರತಮ್ಯದ ವಿರುದ್ಧ ಹೋರಾಡಿ, ಮಹಿಳೆಯರು ಮತ್ತು ಕೆಳ ಜಾತಿಯ ಜನರಿಗೆ ಶಿಕ್ಷಣ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿ ದರು. ಹಾಗಾಗಿ ಅಕ್ಷರದವ್ವ ಜ್ಯೋತಿ ಬಾ ಪುಲೆ ಆರ್ಶಿವಾದ ಮೂಡಿಬರಲಿ,ಮುನ್ನೆಚ್ಚರಿಕೆ ವಹಿಸದಿದ್ದರೆ ಆರ್ಥಿಕ ಬಲ ಕಳೆದು ಕೊಳ್ಳುವಿರಿ, ಮಕ್ಕಳಿಗೆ ವಿದ್ಯೆ ಯಿಂದ ವಂಚಿತರಾಗದಂತೆ ಎಚ್ಚರವಹಿಸಿ, ಮಾತಂಗ ಮಹರ್ಷಿ ಸೇವಾ ಟ್ರಸ್ಟ್ ಮಾದಿಗ ಜನಾಂಗಕ್ಕೆ ದಾರಿ ದೀಪವಾಗಿ ಬೆಳಗಬೇಕೆಂದು ಸಲಹೆ ನೀಡಿದರು.

ತೋಟಗಾರಿಕೆ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ ಅವರು ಮಾತನಾಡಿ,ತಳ ಸಮುದಾಯ ಗಳಲ್ಲಿ ಸಂಘಟನೆ ಕೊರತೆ ಬಹಳಷ್ಟಿದೆ, ಗ್ರಾಮೀಣ ಭಾಗದಲ್ಲಿ ಸರ್ಕಾರಿ ಸೌಲಭ್ಯದಿಂದ ಹಿಂದಿದ್ದಾರೆ. ದಲಿತರು, ಹಿಂದುಳಿದವರು ಪ್ರತಿ ಹಳ್ಳಿಗೆ ತೆರಳಿ ರಾತ್ರಿ ಸಭೆಗಳನ್ನು ನಡೆಸಬೇಕು. ಗ್ರಾಮದಲ್ಲಿ ಆಗುತ್ತಿರುವ ತೊಡಕುಗಳು, ಅಭಿವೃದ್ಧಿಗೆ ಬೇಕಿರುವ ಹಿರಿಯರಿಗೆ ಸಲಹೆ, ಸಹಕಾರ, ಮಾರ್ಗದರ್ಶನ ನೀಡಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಅಣ್ಣೇಶ್ವರ ಗ್ರಾ.ಪಂ. ಉಪಾಧ್ಯಕ್ಷ ಮುನಿರಾಜಪ್ಪ, ಮಾದಿಗ ದಂಡೋರ ಮೀಸಲಾತಿ ಹೋರಾಟ ಸಮಿತಿ ಅಧ್ಯಕ್ಷಎಂ. ವೆಂಕಟೇಶ್, ಮಾಜಿ ಅಧ್ಯಕ್ಷರಾದ ದೇವರಾಜು, ಕದಿರಪ್ಪ, ರೇಷ್ಮೆ ಇಲಾಖೆ ನಿವೃತ್ತದಿಕಾರಿ ಮಲ್ಲಪ್ಪ, ಶ್ರೀ ಮಾತಂಗ ಮಹರ್ಷಿ ಸೇವಾ ಟ್ರಸ್ಟ್ ಗೌರವದ್ಯಕ್ಷ ನಾರಾಯಣಪ್ಪ, ಉಪಾಧ್ಯಕ್ಷೆ ಲಕ್ಷಮ್ಮ,, ಸಂಘಟನಾ ಕಾರ್ಯದರ್ಶಿ ರವಿ, ಖಂಜಾಚಿ ಗಂಗಾಧರ್, ಸಹ ಕಾರ್ಯದರ್ಶಿ ಮುನಿಯಪ್ಪ,

ಪದಾಧಿಕಾರಿಗಳಾದ ಮುನಿರಾಜು, ಸಾಂಸ್ಕೃತಿಕ ಕಲಾವಿದ ಮುನಿರಾಜು,ಮುಖಂಡರಾದ ಗಂಗಯ್ಯ, ಬಿಎಲ್. ಶಂಕರ್, ಅಂಬರೀಷ್, ಮುನಿರಾಜು, ಹೊಸಹುಡ್ಯ ನರಸಿಂಹಮೂರ್ತಿ, ವಕೀಲರಾದ ಮೂರ್ತಿ ಸೇರಿದಂತೆ ಇತರರು ಇದ್ದರು.

## ಈ ಬಾರಿ ಆರ್‌ಸಿಬಿ ಪರ ಆಡಲ್ಲ ಎಲ್ಲಿಸ್ ಪೆರ್ರಿ

**ನವದೆಹಲಿ:** 2026ರ WPL ಪಂದ್ಯದಿಂದ ಎಲ್ಲಿಸ್ ಪೆರ್ರಿ, ತಾರಾ ನರ್ರಿಸ್ ಹಾಗೂ ಅನ್ನಾಬೆಲ್ ಸದರ್ಲ್ಯಾಂಡ್ ಹೊರಗುಳಿ ದಿದ್ದಾರೆ.


2026ರ ಜ.9ರಿಂದ ಫೆ.5ರವರೆಗೆ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯ ನಡೆಯಲಿದ್ದು, ಈ ಟೂರ್ನಿಯಲ್ಲಿ ಆರ್‌ಸಿಬಿಯ ಎಲ್ಲಿಸ್ ಪೆರ್ರಿ ಯುಪಿ ವಾರಿಯರ್ಸ್‌ನ ತಾರಾ ನರ್ರಿಸ್ ಹಾಗೂ ದೆಹಲಿ ಕ್ಯಾಪಿಟಲ್ಸ್‌ನ ಅನ್ನಾಬೆಲ್ ಸದರ್ಲ್ಯಾಂಡ್ ಹೊರಗುಳಿದಿದ್ದಾರೆ ಎಂದು WPL ಎಕ್ಸ್‌ನಲ್ಲಿ ಅಧಿಕೃತವಾಗಿ ಮಾಹಿತಿ ಹಂಚಿಕೊಂಡಿದೆ.



ಆಸ್ಟ್ರೇಲಿಯಾದ ಆಲ್ ರೌಂಡರ್‌ಗಳಾದ ಎಲ್ಲಿಸ್ ಪೆರ್ರಿ ಮತ್ತು ಅನ್ನಾಬೆಲ್ ಸದರ್ಲ್ಯಾಂಡ್ವೈಯಕ್ತಿಕ ಕಾರಣಗಳಿಂದ WPL 2026ರ ಆವೃತ್ತಿಯಿಂದ ಹಿಂದೆ ಸರಿದಿದ್ದಾರೆ. ಆರ್‌ಸಿಬಿ ತಂಡ ಪೆರ್ರಿ ಬದಲಾಗಿ ಸಯಾಲಿ ಸತ್‌ಘರೆ ಅವರನ್ನು, ದೆಹಲಿ ಕ್ಯಾಪಿಟಲ್ಸ್ ತಂಡವು ಸದರ್ಲ್ಯಾಂಡ್ ಬದಲಾಗಿ ಅಲಾನಾ ಕಿಂಗ್ ಅವರನ್ನು ಹೆಸರಿಸಿದೆ.

2026ರ ಜ.18ರಿಂದ ಫೆ.1ರವರೆಗೆ ನೇಪಾಳದಲ್ಲಿ 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಅರ್ಹತಾ ಪಂದ್ಯ ನಡೆಯಲಿದೆ. ಈ ಪಂದ್ಯದಲ್ಲಿ ಯುಎಸ್ ನ್ಯಾಷನಲ್ ಟೀಮ್‌ಗೆ ತಾರಾ ನರ್ರಿಸ್ ಅವರನ್ನು ಆಯ್ಕೆ ಮಾಡಲಾಗಿದೆ. ಹೀಗಾಗಿ ಜ.9ರಿಂದ ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್‌ನಿಂದ ತಾರಾ ನರ್ರಿಸ್ ಅವರು ಹೊರಗುಳಿದಿದ್ದಾರೆ. ಅವರ ಸ್ಥಾನಕ್ಕೆ ಯುಪಿ ವಾರಿಯರ್ಸ್ ತಂಡವು ಆಸ್ಟ್ರೇಲಿಯಾದ ಆಲ್ ರೌಂಡರ್ ಚಾರ್ಲಿ ನಾಟ್ ಅವರನ್ನು ಬದಲಿಯಾಗಿ ಆಯ್ಕೆಮಾಡಿಕೊಂಡಿದೆ.

# ಮದುವೆ ಬೇಡ ಎಂದಿದ್ದಕ್ಕೆ ಪ್ರಾಣ ತೆಗೆದ ಆರೋಪಿ; ನಂತರ ನೇಣಿಗೆ ಶರಣು



**ಕಾರವಾರ:** ಮದುವೆಗೆ ನಿರಾಕರಿಸಿದ ವಿಚ್ಛೇದಿತ ಮಹಿಳೆಯನ್ನು ನಡು ರಸ್ತೆಯಲ್ಲೇ ಚಾಕು ಇರಿದು ಬರ್ಬರವಾಗಿ ಹತ್ಯೆ ಮಾಡಿದ ಆರೋಪಿಯು ಬಳಿಕ ತಾನೂ ಕೂಡ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಭೀಕರ ಘಟನೆ ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನಲ್ಲಿ ನಡೆದಿದೆ.

ಯಲ್ಲಾಪುರ ನಿವಾಸಿ ರಂಜಿತಾ (30) ಎಂಬ ಮಹಿಳೆಯೇ ಈ ದುರ್ಘಟನೆ ಯಲ್ಲಿ ಬಲಿಯಾಗಿದ್ದಾರೆ. ಆರೋಪಿ ರಫೀಕ್ ಎಂಬ ಯುವಕ, ರಂಜಿತಾಳನ್ನು ಮದುವೆ ಯಾಗುವಂತೆ ಹಲವು ತಿಂಗಳಿಂದ ಒತ್ತಾಯಿಸುತ್ತಿದ್ದನೆಂದು ತಿಳಿದುಬಂದಿದೆ. ರಂಜಿತಾ ಈ ಮದುವೆಗೆ ನಿರಾಕರಿಸಿದ್ದರೂ, ಆರೋಪಿ ಪದೇಪದೇ ಸತಾಯಿಸುತ್ತಿದ್ದ ಎನ್ನಲಾಗಿದೆ.

ರಂಜಿತಾ ಹತ್ತು ವರ್ಷಗಳ ಹಿಂದೆ ವಿಚ್ಛೇದನ ಪಡೆದಿದ್ದು, ಒಂದು ಮಗುವಿನ ತಾಯಿ. ಯಲ್ಲಾಪುರದಲ್ಲಿ ತಂದೆ-ತಾಯಿ ಹಾಗೂ ಅಣ್ಣನೊಂದಿಗೆ ವಾಸವಿದ್ದ ಅವರು, ಸರ್ಕಾರಿ ಶಾಲೆಯೊಂದರಲ್ಲಿ ಬಿಸಿಯೂಟ ಸಹಾಯಕಿಯಾಗಿ ಕಾರ್ಯನಿ ರ್ವ ಹಿಸುತ್ತಿದ್ದರು. ತಮ್ಮ ಹಿಂದಿನ ವಿವಾಹ ಜೀವನದಲ್ಲಿ ಅನುಭವಿಸಿದ ನೋವು ಮತ್ತು ಸಂಕಷ್ಟಗಳ ಕಾರಣದಿಂದ ಮತ್ತೆ ಮದುವೆಯಾಗುವುದಿಲ್ಲ ಎಂದು ಅವರು ಹೇಳಿದ್ದರು.

ರಂಜಿತಾ ಕುಟುಂಬ ಮತ್ತು ಆರೋಪಿ ರಫೀಕ್ ಕುಟುಂಬದ ನಡುವೆ ಪರಿಚಯವಿದ್ದು, ಈ ಕಾರಣದಿಂದ ರಫೀಕ್ ಆಗಾಗ ರಂಜಿತಾಳ ಮನೆಗೆ ಬರುತ್ತಿದ್ದನೆಂದು ಹೇಳಲಾಗಿದೆ.



ಘಟನೆ ನಡೆದ ದಿನ, ಎಂದಿನಂತೆ ಶಾಲೆಯಿಂದ ಕೆಲಸ ಮುಗಿಸಿಕೊಂಡು ಮನೆಗೆ ತೆರಳುತ್ತಿದ್ದ ರಂಜಿತಾಳನ್ನು ನಡು ರಸ್ತೆಯಲ್ಲೇ ರಫೀಕ್ ಅಡ್ಡಗಟ್ಟಿದ್ದಾನೆ. "ನನ್ನನ್ನು ಮದುವೆಯಾಗುತ್ತೀಯೋ ಇಲ್ಲವೋ?" ಎಂದು ಮತ್ತೆ ಪ್ರಶ್ನಿಸಿದ್ದಾನೆ. ಇದಕ್ಕೆ ರಂಜಿತಾ ಖಡಕ್ ಆಗಿ "ನಾನು ಮದುವೆ ಯಾಗಲ್ಲ" ಎಂದು ಹೇಳಿದ್ದಾಳೆ. ಇದರಿಂದ ಕೋಪ ಗೊಂಡ ಆರೋಪಿ, ಚಾಕುವಿನಿಂದ ಮನಬಂದಂತೆ ಇರಿದು ಪರಾರಿಯಾಗಿದ್ದಾನೆ.

ರಕ್ತದ ಮಡುವಿನಲ್ಲಿ ಬಿದ್ದಿದ್ದ ರಂಜಿತಾಳನ್ನು ಸ್ಥಳೀಯರು ತಕ್ಷಣ ಆಸ್ಪತ್ರೆಗೆ ದಾಖಲಿಸಿದರೂ, ಚಿಕಿತ್ಸೆ ಫಲಕಾರಿಯಾಗದೆ ಅವರು ಸಾವನ್ನಪ್ಪಿದ್ದಾರೆ.

ಈ ಘಟನೆ ತಿಳಿಯುತ್ತಿದ್ದಂತೆ ಯಲ್ಲಾಪುರದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿದ್ದು, ಹಿಂದೂಪರ ಸಂಘಟನೆಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿ ಆರೋಪಿಯನ್ನು ತಕ್ಷಣ ಬಂಧಿಸುವಂತೆ ಆಗ್ರಹಿಸಿ ಯಲ್ಲಾಪುರ ಬಂದ್‌ಗೆ ಕರೆ ನೀಡಿದ್ದವು.

ಇದೇ ವೇಳೆ, ಮಹಿಳೆಯನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ ರಫೀಕ್‌ನ ಪತ್ತೆಗಾಗಿ ಪೊಲೀಸರು ಶ್ವಾನದಳದ ಸಹಾಯದಿಂದ ತೀವ್ರ ಶೋಧ ಕಾರ್ಯ ನಡೆಸುತ್ತಿದ್ದರು. ಶೋಧದ ವೇಳೆ, ಯಲ್ಲಾಪುರದ ಕಾಳಮ್ಮನಗರದ ನಿವಾಸದಲ್ಲಿ ರಫೀಕ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದಾಗ ಆರೋಪಿ ಮೃತಪಟ್ಟಿರುವುದು ದೃಢಪಟ್ಟಿದೆ.

Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.